# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

**ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ, ಹೊರಮಾವು ಉಪ ವಿಭಾಗ,**

**ಮಹದೇವಪುರ ವಲಯ, ಬೆಂಗಳೂರು – 560 113.**

ಸಂಖ್ಯೆ:ಸ.ಅ/ರಾ.ಮೂ.ನ/ಪಿ.ಆರ್/ /2021-22 ದಿನಾಂಕ:- 23/11/2021

## "ಸಭಾ ಸೂಚನಾ ಪತ್ರ"

**ವಿಷಯ:-** ವಾರ್ಡ್ ನಂ-51 ರ ವಿಜಿನಾಪುರ ವಾರ್ಡ್ ಕಮಿಟಿ ಅಧ್ಯಕ್ಷರು ರವರ ಅಧ್ಯಕ್ಷತೆಯಲ್ಲಿ ದಿನಾಂಕ:-24.11.2021 ರಂದು ಬುಧವಾರ ಬೆಳಗ್ಗೆ 11.30 ಗಂಟೆಗೆ ವಾರ್ಡ್ ಸಮಿತಿಯ ಸದಸ್ಯರುಗಳಿಗೆ ಸಭೆ ಕರೆದಿರುವ ಬಗ್ಗೆ.

* * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವಿಜಿನಾಪುರ ವಾರ್ಡ್ ನಂ-51 ರ ಕಾರ್ಯದರ್ಶಿ ಮತ್ತು ಸಂಚಾಲಕರು ರವರ ಸಮ್ಮುಖದಲ್ಲಿ ವಾರ್ಡ್ ನಂ-51 ಕ್ಕೆ ಸಂಬಂಧಿಸಿದಂತೆ ವಾರ್ಡ್ ಸಮಿತಿಯ ಸದಸ್ಯರುಗಳಿಗೆ ವಿಜಿನಾಪುರ ವಾರ್ಡ್ ಕಛೇರಿಯಲ್ಲಿ ಸಭೆ ಕರೆಯಲಾಗಿದ್ದು, ತಾವುಗಳು ಮೇಲ್ಕಂಡ ದಿನಾಂಕದಂದು ತಪ್ಪದೇ ಸಭೆಗೆ ಹಾಜರಾಗಲು ಈ ಮೂಲಕ ತಮ್ಮಲ್ಲಿ ಕೋರಲಾಗಿದೆ.

**ವಿಶೇಷ ಸೂಚನೆ:-** Covid 19 ಇರುವುದರಿಂದ ಎಲ್ಲಾರು ಕಡ್ಡಾಯವಾಗಿ ಸ್ಯಾನಿಟೈಜರ್ ಬಳಸಿ, ಮಾಸ್ಕ್ ಧರಿಸಬೇಕು ಮತ್ತು ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳುವುದು.

O/C

ಕಾರ್ಯದರ್ಶಿಗಳು ಮತ್ತು ಸಂಚಾಲಕರು
ಹಾಗೂ ಸಹಾಯಕ ಅಭಿಯಂತರರು
ವಿಜಿನಾಪುರ ವಾರ್ಡ್ ಸಂಖ್ಯೆ-51.

Office of the Police Inspector, K.R. Puram Traffic Police Station, Bangalore City. SL No. 23/11/21 DATE 24/11 13/40

ಇವರಿಗೆ,

23/11/2021

**ಪ್ರತಿಯನ್ನು:-**

1) ಮಾನ್ಯ ಜಂಟಿ ಆಯುಕ್ತರು ಮಹದೇವಪುರ ವಲಯರವರ ರವರ ಘನ ಮಾಹಿತಿಗಾಗಿ.
2) ಮಾನ್ಯ ಮುಖ್ಯ ಅಭಿಯಂತರರು ಮಹದೇವಪುರ ವಲಯರವರ ರವರ ಘನ ಮಾಹಿತಿಗಾಗಿ.
3) ಕಾರ್ಯಪಾಲಕ ಅಭಿಯಂತರರು ಕೆ.ಆರ್.ಪುರ ವಿಭಾಗರವರ ಘನ ಮಾಹಿತಿಗಾಗಿ.
4) ಸಹಾಯಕ ಕಾರ್ಯಪಾಲಕ ಅಭಿಯಂತರರು ಹೊರಮಾವು ಉಪ ವಿಭಾಗ ರವರ ಘನ ಮಾಹಿತಿಗಾಗಿ.
5) ರಸ್ತೆ ಮೂಲಭೂತ ಸೌಕರ್ಯ ವಿಭಾಗ, ಕೇಂದ್ರ ಕಛೇರಿ ಅನೆಕ್ಸರ್ ಕಟ್ಟಡ, ರವರ ಘನ ಮಾಹಿತಿಗಾಗಿ.
6) ಡಬ್ಲ್ಯೂ.ಎಸ್.ಎಸ್.ಬಿ, ಐ.ಟಿ.ಐ ಸರ್ಕಲ್, ದೂರವಾಣಿ ನಗರ ಅಂಚೆ, ಬೆಂಗಳೂರು-16 ರವರ ಮಾಹಿತಿಗಾಗಿ.
7) ರಾಜಕಾಲುವೆ ವಿಭಾಗ ಕಛೇರಿ, ನೃಪತುಂಗ ಸರ್ಕಲ್, ಬೆಂಗಳೂರು.
8) ಸಹಾಯಕ ಕಾರ್ಯಪಾಲಕ ಅಭಿಯಂತರರು, ಇ-10 ಉಪ-ವಿಭಾಗ, ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ, ರಾಮಮೂರ್ತಿನಗರ, ಬೆಂಗಳೂರು.
9) ಕಛೇರಿ ಪ್ರತಿ.

Scanned with Oken Scanner

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ ಕಟ್ಟಡ ಜಯಂತಿ ನಗರ ವೃತ್ತ ಹೊರಮಾವು/ಕಲ್ಕೆರೆ ಮುಖ್ಯರಸ್ತೆ,
ಹೊರಮಾವು ಗ್ರಾಮ, ಬೆಂಗಳೂರು- 560113

ಸಂಖ್ಯೆ.ಬಿಬಿಎಂಪಿ/ಸ.ಕಾ.ಅ/ಹೊಉವಿ/ಪಿಆರ್/ /2021-22 ದಿನಾಂಕ: 24.11.2021

## ದಿನಾಂಕ-24.11.2021 ರಂದು ನಡೆದಿರುವ ವಿಜಿನಾಪುರ ವಾರ್ಡ್ ಸಂಖ್ಯೆ-51 ರ ವಾರ್ಡ್ ಸಮಿತಿ ಸಭೆ ನಡುವಳಿಗಳು

| | ಸದಸ್ಯರ ಹೆಸರು ಮತ್ತು ಪದನಾಮ | ಸದಸ್ಯರ ಹಾಜರು/ಗೈರು ಹಾಜರು |
|---|---|---|
| 1 | ಶ್ರೀಮತಿ.ತ್ರಿವೇಣಿ (ಅಧ್ಯಕ್ಷರು) | ಹಾಜರು |
| 2 | ಶ್ರೀ.ಪುಷ್ಪರಾಜು(ಸದಸ್ಯರು) | ಹಾಜರು |
| 3 | ಶ್ರೀ.ಪಾರ್ಥಸಾರಥಿ (ಸದಸ್ಯರು) | ಹಾಜರು |
| 4 | ಶ್ರೀ.ಕೆ.ನಾಗಭೂಷಣ, ಸಹಾಯಕ ಅಭಿಯಂತರರು (ವಾರ್ಡ್ ನಂ.51) (ಕಾರ್ಯದರ್ಶಿ) | ಹಾಜರು |
| 5 | ಶ್ರೀ.ರಾಜಣ್ಣ (ಹಿ.ಆ.ಪ) ವಾರ್ಡ್ ನಂ.51 | ಹಾಜರು |
| 6 | ಶ್ರೀ.ಮಧು (ಕಿ.ಆ.ಪ) ವಾರ್ಡ್ ನಂ.51 | ಹಾಜರು |
| 7 | ಶ್ರೀ.ಮಂಜುನಾಥ ಬಡಿಗೇರ್ (ಕಂದಾಯ ಪರಿವೀಕ್ಷಕರು) | ಹಾಜರು |
| 8 | ಶ್ರೀ.ಮಹೇಂದ್ರ ಕುಮಾರ್ (ಸಲಹೆಗಾರರು, ಕಂದಾಯ ಇಲಾಖೆ ) | ಹಾಜರು |
| 9 | ಶ್ರೀ.ನಾಗರಾಜ್, ಕೆಲಸ ಪರಿವೀಕ್ಷಕರು ವಾರ್ಡ್ ನಂ.51 | ಹಾಜರು |
| 10 | ಶ್ರೀ.ರಂಗಯ್ಯ, ವಾಟರ್ ಇನ್ಸ್‌ಪೆಕ್ಟರ್ | ಹಾಜರು |
| 11 | ಶ್ರೀ.ಲಕ್ಷ್ಮಣ, ಮಾರ್ಷಲ್ | ಹಾಜರು |
| 12 | ಶ್ರೀ.ಡಿ.ವೈ.ಮೋಹನ್, ಪಶು ಸಂಗೋಪನಾ ಇಲಾಖೆ | ಹಾಜರು |
| 13 | ಶ್ರೀಮತಿ.ಜಯಂತಿ (ಸದಸ್ಯರು) | ಹಾಜರು |
| 15 | ಶ್ರೀ.ವೇಣುಗೋಪಾಲ್ ಜೆ.ಇ (ಬೆಸ್ಕಾಂ) | ಹಾಜರು |
| 16 | ಶ್ರೀ.ರಾಮಾಂಜಿನಪ್ಪ (ಎ.ಎಸ್.ಐ, ಟ್ರಾಫಿಕ್) | ಹಾಜರು |
| 17 | ಶ್ರೀ.ಎಂ.ಸತೀಶ್, ಸಹಾಯಕ ಅಭಿಯಂತರರು, ರಸ್ತೆ ಮೂಲಭೂತ ಸೌಕರ್ಯ | ಹಾಜರು |
| 18 | ಶ್ರೀಮತಿ.ಮೋನಿಕಾ ಮಾಲಿನಿ ಮನ್ನತ್ (ಎಸ್.ಆರ್.ಕಾಲೋನಿ) | ಹಾಜರು |

ದಿನಾಂಕ-24.11.2021 ರಂದು ಪೂರ್ವಾಹ್ನ: 11.30 ಗಂಟೆ ಸಮಯದಲ್ಲಿ ಸಭೆಯನ್ನು ಪ್ರಾರಂಭಿಸಲಾಯಿತು. ಮೊದಲನೆಯನದಾಗಿ ಶ್ರೀಮತಿ.ತ್ರಿವೇಣಿ ಅಧ್ಯಕ್ಷರು ರವರು ಸಭೆಯಲ್ಲಿ ಹಾಜರಿರುವ ಸದಸ್ಯರುಗಳು ಮತ್ತು ಅಧಿಕಾರಿ ವೃಂಧದವರಿಗೆಲ್ಲಾ ಸ್ವಾಗತಕೋರಿದರು. ತದನಂತರ ಈ ಕೆಳಕಂಡ ವಿಷಯಗಳ ಬಗ್ಗೆ ಈ ಸಭೆಯಲ್ಲಿ ಚರ್ಚಿಸಲಾಯಿತು.

Scanned with Oken Scanner

1. ಶ್ರೀ.ಪುಷ್ಪರಾಜು ರವರು ಮಾತನಾಡುತ್ತಾ, ಎಸ್.ಪಿ.ನಾಯ್ಡು ಬಡಾವಣೆಯಲ್ಲಿ ಬೀದಿ ದೀಪಗಳ ಸಮಸ್ಯೆ ಹಾಗೂ ಲಕ್ಷ್ಮಿ ಟೆಂಟ್‌ರಸ್ತೆ, ಕುವೆಂಪು ಬಡಾವಣೆ ಮತ್ತು ಎಸ್.ಪಿ.ನಾಯ್ಡು ಬಡಾವಣೆಗಳಲ್ಲಿ ಬೀದಿ ನಾಯಿಗಳ ಹಾವಳಿ ಹೆಚ್ಚಾಗಿದ್ದು, ಹಾಗೂ ವಾರ್ಡ್‌ಮಟ್ಟದಲ್ಲಿ ಸಿ.ಸಿ.ಟಿವಿ ಕ್ಯಾಮೆರಾಗಳನ್ನು ಅಳವಡಿಸುವ ಕಾಮಗಾರಿ ನಡೆಯುತ್ತಿದ್ದು, ಇದರ ಬಗ್ಗೆ ಸ್ಥಳದ ಮಾಹಿತಿ ಸಭೆಯಲ್ಲಿ ಕೋರಿರುತ್ತಾರೆ.

   ಕ್ರಮ:- ಸಹಾಯಕ ಅಭಿಯಂತರರು, ಬೆಸ್ಕಾಂ ವಿಜಿನಾಪುರ ರವರಿಗೆ ಮತ್ತು ಸಭೆಯಲ್ಲಿ ಹಾಜರಿದ್ದ ಪಶುಸಂಗೋಪನ ಇಲಾಖೆ ರವರಿಗೆ ಮತ್ತು ಸಹಾಯಕ ಅಭಿಯಂತರರು (ವಿದ್ಯುತ್) ರವರಿಗೆ ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು.

2. ಶ್ರೀಮತಿ.ಜಯಂತಿ ರವರು ಮಾತನಾಡಿ ರಾಮಮೂರ್ತಿನಗರ ಮುಖ್ಯರಸ್ತೆಯಲ್ಲಿ ಚರಂಡಿಯಲ್ಲಿ ಹೂಳು ತೆಗೆಯಬೇಕೆಂದು ಕೋರಿದ್ದು, ಹಾಗೂ ಆರ್.ಆರ್.ನಗರ 2ನೇ ಅಡ್ಡರಸ್ತೆಯಲ್ಲಿ ಚರಂಡಿಯಲ್ಲಿ ಹೂಳು ತೆಗೆಯಬೇಕೆಂದು ಕೋರಿದ್ದು, ಮತ್ತು ಸಂಚಾರಿ ಪೋಲೀಸ್ ರವರು ನಿಂತಿರುವ ವಾಹನಗಳನ್ನು ತೆರವುಗೊಳಿಸುವ ಮೊದಲು ಘೋಷಣೆ ಮಾಡಿ ನಂತರ ತೆಗೆಯಬೇಕೆಂದು ಇದರ ಬಗ್ಗೆ ಕ್ರಮಕ್ಕೆಗೊಳ್ಳಲು ಸಭೆಯಲ್ಲಿ ಸಾರ್ವಜನಿಕರು ಕೋರಿರುತ್ತಾರೆ.

   ಕ್ರಮ:- ಸಹಾಯಕ ಅಭಿಯಂತರರು, ರಸ್ತೆ ಮೂಲಭೂತ ಸೌಕರ್ಯ ಮತ್ತು ಬೃಹತ್ ನೀರುಗಾಲುವೆ ವಿಭಾಗ ಹಾಗೂ ಸಭೆಯಲ್ಲಿ ಹಾಜರಿದ್ದ ಸಂಚಾರಿ ಪೋಲೀಸ್ ರವರಿಗೆ ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು.

4. ಶ್ರೀ.ಶಿವರಾಮ್ ರವರು ಮಾತನಾಡುತ್ತಾ, ಸಮಾಜ ಕಲ್ಯಾಣ ವತಿಯಿಂದ ಸಾರ್ವಜನಿಕರಿಗೆ ಲಭಿಸುವ ಮೂಲಭೂತ ಸೌಕರ್ಯಗಳ ವಿವರಗಳನ್ನು ಕೋರಿದ್ದು, ರೈಲ್ವೇಸ್ಟೇಷನ್ ರಸ್ತೆ ಅಮಾನುಲ್ಲಾ ಮನೆ ಹತ್ತಿರ ಬೆಸ್ಕಾಂ ರವರು ಗುಂಡಿ ಮುಚ್ಚಿರುವುದಿಲ್ಲ. ಇದರ ಬಗ್ಗೆ ಕ್ರಮ ಕೈಗೊಳ್ಳಬೇಕೆಂದು ಸಭೆಯಲ್ಲಿ ಕೋರಿರುತ್ತಾರೆ.

   ಕ್ರಮ : ಸಹಾಯಕ ಅಭಿಯಂತರರು, ಬೆಸ್ಕಾಂ ಮತ್ತು ಸಮಾಜ ಕಲ್ಯಾಣ ಇಲಾಖೆ ಮಹದೇವಪುರ ರವರಿಗೆ ಅಗತ್ಯ ಕ್ರಮವಹಿಸಲು ತಿಳಿಸುವುದಾಗಿ ಸಭೆಯು ಸೂಚಿಸಿತು.

5. ಶ್ರೀಮತಿ.ಮೋನಿಕಾ ಮಾಲಿನಿ ಮನ್ನತ್ (ಎನ್.ಆರ್.ಕಾಲೋನಿ) ರವರು ಮಾತನಾಡಿ ರವರು ಮಾತನಾಡಿ ಎಫ್.ಸಿ.ಐ ಅಂಡರ್‌ಪಾಸ್ ಹಾಗೂ ಸುತ್ತಮುತ್ತಲಿನ ರಸ್ತೆಗಳನ್ನು ಸ್ವಚ್ಛತೆ ಮಾಡಲು ಕೋರಿರುತ್ತಾರೆ.

   ಕ್ರಮ:- ಸಹಾಯಕ ಅಭಿಯಂತರರು, ರಸ್ತೆ ಮೂಲಭೂತ ಸೌಕರ್ಯ ರವರಿಗೆ ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು.

ಸಭೆಯನ್ನು ಮುಕ್ತಾಯಗೊಳಿಸುವ ಸಲುವಾಗಿ ಕೊನೆಯದಾಗಿ ಅಧ್ಯಕ್ಷರು ರವರು ಸಲಹೆ ಸೂಚನೆಗಳನ್ನು ಚರ್ಚಿಸಿದ್ದಕ್ಕೆ ಧನ್ಯವಾದಗಳನ್ನು ತಿಳಿಸುತ್ತಾ, ವಾರ್ಡ್‌ನ್ನು ಅಭಿವೃದ್ಧಿಪಡಿಸುವ ಬಗ್ಗೆ ವಾರ್ಡ್ ಮಟ್ಟದಲ್ಲಿ ಕಾರ್ಯ ಯೋಜನೆಯನ್ನು ರೂಪಿಸಿಕೊಂಡು ಕ್ರಮವಹಿಸುವುದಾಗಿ ತಿಳಿಸುತ್ತಾ, ಸಭೆಗೆ ಹಾಜರಾಗದ ಅಧಿಕಾರಿಗಳ ವಿರುದ್ಧ ಅಸಮಧಾನ ವ್ಯಕ್ತಪಡಿಸಿ ಮುಂದಿನ ಸಭೆಯಲ್ಲಿ ಎಲ್ಲರೂ ಹಾಜರಾಗಲೂ ಕ್ರಮಕ್ಕೆಗೊಳ್ಳಲು ಕೋರಿಕೊಂಡಿದ್ದು, ಸಭೆಯನ್ನು ಮುಕ್ತಾಯಗೊಳಿಸುವ ಸಲುವಾಗಿ ಕೊನೆಯದಾಗಿ ಸಭೆಯಲ್ಲಿ ನುರಿತ ಸಲಹೆ ಸೂಚನೆಗಳನ್ನು ಚರ್ಚಿಸಿದ್ದಕ್ಕೆ ಧನ್ಯವಾದಗಳನ್ನು ತಿಳಿಸುತ್ತಾ, ವಾರ್ಡ್‌ನ್ನು ಸಮಗ್ರವಾಗಿ ಅಭಿವೃದ್ಧಿಪಡಿಸುವ ಬಗ್ಗೆ ವಾರ್ಡ್ ಮಟ್ಟದಲ್ಲಿ ಕಾರ್ಯಯೋಜನೆಯನ್ನು ರೂಪಿಸಿಕೊಂಡು ಕ್ರಮವಹಿಸುವುದಾಗಿ ತಿಳಿಸುತ್ತಾ, ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿದರು.

Kavagali Mane

ವಾರ್ಡ್ ಸಮಿತಿ ಕಾರ್ಯದರ್ಶಿಗಳು,
ವಾರ್ಡ್ ನಂ.51, ವಿಜಿನಾಪುರ

ಅಧ್ಯಕ್ಷರು, ವಾರ್ಡ್ ಕಮಿಟಿ
ವಾರ್ಡ್ ನಂ.51, ವಿಜಿನಾಪುರ

Scanned with Oken Scanner